ನಿಲ್ಲಿಸಿ ಋಜು ಜೀವನ ನಡೆಸಬೇಕು. ಏಕಾಗ್ರತೆಯಿಂದ ಜನ ಆಲಿಸುತ್ತಿದ್ದಾರೆ. ಮೂಲೆಯಲ್ಲಿ ಕುಳಿತು ಅವಳೂ ಚಿತ್ತವಿಟ್ಟು ಏಕಾಗ್ರತೆಯಿಂದ ಆಲಿಸುತ್ತಿದ್ದಾಳೆ.

ಧ್ಯಾನ ಮಾಡುವುದನ್ನೂ ಕಲಿಸುತ್ತಿದ್ದಾರೆ. ಮತ್ತೊಂದು ದಿನ ತೇಜೋಮೂರ್ತಿಯೂ ಕರುಣಾಶಾಲಿಯೂ ಆಗಿರುವ ಮಹಾನುಭಾವರು ಪ್ರಾಣಿ ಹಿಂಸೆ ಮಾಡದೆ ಯಾರಿಗೂ ನೋವಾಗದ ಪರಿಯಲ್ಲಿ ವ್ಯವಹರಿಸುವುದು; ಸತ್ಯವಾಗಿ ನುಡಿದು ಅದರಂತೆ ನಡೆಯುವುದು, ಹಾದರ ಮಾಡದಿರುವುದು; ಕಳ್ಳತನ ಮಾಡದಿರುವುದು; ಮನಸ್ಸನ್ನು ವಿಕಾರಗೊಳಿಸುವ ಮಾದಕ ದ್ರವ್ಯಗಳ ಸೇವನೆ ಮಾಡದೇ ಇರುವುದು. ಇವೇ ಪಂಚಶೀಲಗಳ ಆಚರಣೆಯಿಂದ ಮನ ಸ್ವಾಸ್ಥ್ಯ ಪಡೆಯಬಹುದು ಎನ್ನುವ ಜೀವನದ ಸರಳ ಸೂತ್ರಗಳನ್ನೂ ತಿಳಿಸುತ್ತಾರೆ.

ಮುಂದುವರೆದಂತೆ ಯಾರೊಬ್ಬರೂ ಬೇರೆಯವರ ನೋವು ಸ್ವೀಕರಿಸಲಾಗಲೀ ಪರಿಹರಿಸಲಾಗಲೀ ಸಾಧ್ಯವಿಲ್ಲ. ತಾವೇ ಸ್ವತಃ ಸಾಧನೆಯ ಹಾದಿಯಲ್ಲಿ ಹೆಜ್ಜೆಯಿಟ್ಟು ನಡೆದು ಪರಿಹಾರ ಕಂಡುಕೊಳ್ಳಬೇಕು ಎಂದೂ ತಿಳಿಸುತ್ತಾರೆ. ತನ್ನೆಲ್ಲ ನೋವು ದುಮ್ಮಾನಗಳನ್ನು ಮರೆತು ಶಾಂತಚಿತ್ತಳಾಗಿ ಆಲಿಸುತ್ತಿದ್ದಾಳೆ! ಮನಸ್ಸಿನ ಚಂಚಲ ಸ್ವಭಾವವನ್ನೂ ಅರಿಯುತ್ತಾಳೆ. ಮಾರ್ಗದರ್ಶಕರ ಸೂಚನೆಯಂತೆ ಧ್ಯಾನವನ್ನೂ ಮುಂದುವರೆಸುತ್ತಾಳೆ. ಮನಸ್ಸಿನ ಸಂತೋಷಕ್ಕೆ ಕಾರಣವಾಗುವ ವಿಷಯಗಳು, ಕ್ರಿಯೆಗಳೂ ರಾಗವಾಗಿಯೂ; ತನಗೆ ಹಿತವಾಗದ ವಿಷಯಗಳು ಕ್ರಿಯೆಗಳೂ ದ್ವೇಷವಾಗಿಯೂ ಕಾಣುತ್ತವೆ. ಇವುಗಳಿಗೆ ವಿವಶವಾಗದೇ, ಪ್ರತಿಕ್ರಿಯೆ ವ್ಯಕ್ತಪಡಿಸದೇ ಸಮತೆಯಲ್ಲಿರುವುದನ್ನೂ ಕಲಿಯಬೇಕು ಎಂದೂ ಸ್ಪಷ್ಟಪಡಿಸುತ್ತಾರೆ.

ರೋಗಿಷ್ಟೆಯೂ ಪರಮಪತಿತೆಯೂ ಆಗಿದ್ದ ತನ್ನನ್ನೂ ಕರುಣೆಯಿಂದ ಕರೆ ತಂದು ಮಹಿಳಾ ಶಿಬಿರದಲ್ಲಿರಲು ಅವಕಾಶ ಕಲ್ಪಿಸಿದ್ದಾರೆ. ಏನಾಶ್ಚರ್ಯ! ಎಲ್ಲೆಲ್ಲಿಯೂ ನೀರವ! ಯಾರೊಬ್ಬರೂ ಸಶಬ್ದವಾಗಿ ಕೆಮ್ಮುತ್ತಿಲ್ಲ ಕೂಡಾ. ಮೌನವೆಂದರೆ ಮಹಾಮೌನವೇ ಮೈವೆತ್ತಂತಿದೆ! ದೂಪವಿಲ್ಲ, ದೀಪವಿಲ್ಲ, ನೈವೇದ್ಯವಿಲ್ಲ, ಹೂಪತ್ರೆ ಪೂಜೆ ಮಂಗಳಾರತಿಯಿಲ್ಲ; ಮಂತ್ರಘೋಷವಿಲ್ಲ, ಗಂಟಾ ನಾದವಿಲ್ಲ ಅಷ್ಟೇ ಏಕೆ ಅಲ್ಲಿ ಯಾವುದೇ ದೇವ ಪ್ರತಿಮೆಯೇ ಇಲ್ಲ! ಪ್ರಶಾಂತ, ಪರಿಶುಭ್ರವಾದ ಕೇವಲ ಧ್ಯಾನಮಂದಿರವಿದೆ. ನಿರಾಡಂಬರ ಬದುಕು ನಡೆಸಲು ಮಾರ್ಗದರ್ಶನ ನೀಡುವ ಅನುಭವಿ ಸಹೋದರ ಸಹೋದರಿಯರಿದ್ದಾರೆ. ಎಲ್ಲಿಯೂ ಅಹಂ ಪ್ರದರ್ಶನಕ್ಕೆ ಎಡೆಯೇ ಇಲ್ಲ. ನಿರಂತರವಾಗಿ ಸತ್ಯಶೋಧನೆಯ ಸಹಜ ಬದುಕು ರೂಪಿಸುವ ತಾಣವಾಗಿದೆ.

ಒಂದು ದಿನ ಪ್ರವಚನದಲ್ಲಿ ಬುದ್ಧರೆಂದರೆ ಜ್ಞಾನೋದಯವಾದವನು, ಸತ್ಯದರ್ಶನ ವಾದವರೆಂದು ಸ್ವತಃ ಭಗವಾನ್ ಬುದ್ಧರೇ ಹೇಳಿರುವಂತೆ ತನಗಿಂತ ಮೊದಲು ಕೂಡಾ ಬುದ್ಧರಿದ್ದರು, ಈಗಲೂ ಇರುತ್ತಾರೆ ಮುಂದೆಯೂ ಕೂಡಾ! ಸರಿಯಾದ ಮಾರ್ಗದಲ್ಲಿ ನಡೆದು ಎಲ್ಲರೂ ಬುದ್ಧರಾಗಬಹುದೆಂದು ಸ್ಪಷ್ಟಪಡಿಸಿದ್ದಾರೆ ಎಂಬ ಆರ್ಯಸತ್ಯವನ್ನು ತಿಳಿಸುತ್ತಾರೆ. ಪ್ರಶ್ನೆ ಉತ್ತರಗಳ ಮುಖೇನ ಸಂಶಯಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಇದಮಿತ್ಥಂ ಎನ್ನುವಂತಿರುವ ಸತ್ಯಮಾರ್ಗವಾಗಿದ್ದರೂ, ಅತ್ಯಂತ ವಿನಯಪೂರ್ವಕವಾಗಿ ಬಹಳ ಜನರಿಂದ ಹೇಳಲ್ಪಟ್ಟಿದೆ, ಕೇಳಲ್ಪಟ್ಟಿದೆ, ನಂಬಿಕೊಂಡು ನಡೆದು ಬಂದಿದೆ, ಬಹಳ ಜನರಿಗೆ ಅನುಕೂಲವಾಗಿದೆ, ಪ್ರಸಿದ್ಧವಾಗಿದೆ ಎಂದರೂ ಕೂಡಾ ಯಾರೊಬ್ಬರೂ ಅಂಧಾನುಕರಣೆ ಮಾಡಬಾರದೆಂದೂ; ಆ ಬುದ್ಧರ ಅನುಭವವನ್ನೂ ಮಾರ್ಗವನ್ನೂ ಸ್ವತಃ ಅಭ್ಯಾಸ ಮಾಡಿ ತಮ್ಮ ಅನುಭವ ಮಾಡಿಕೊಂಡು ಸರಿಯೆನ್ನಿಸಿದರೆ ಮಾತ್ರ ಪಾಲಿಸಬೇಕು ಎಂದು ಅರಿಕೆ ಮಾಡಿಕೊಳ್ಳುತ್ತಾರೆ.

ಕಾಲ ಗತಿಸುತ್ತಿದೆ. ಮನಶ್ಶಾಂತಿಯನ್ನರಸಿ ಬಂದವರು, ಅಸುಖಿಗಳು, ರೋಗಿಷ್ಟರು, ಪರಮಪಾಪಿಷ್ಟರು, ಜ್ಞಾನಪಿಪಾಸುಗಳು, ದೇಶ ವಿದೇಶಗಳಿಂದ ಅನೇಕ ಜಾತಿ, ಮತ, ಪಂಥ, ಭಾಷೆಗಳಿಗೆ ಸೇರಿದವರು ಶಿಬಿರಾರ್ಥಿಗಳಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಇಲ್ಲಿನ ಮಾರ್ಗದರ್ಶಕರಾದರೂ ಕಮಂಡಲ ಹಿಡಿದವರಲ್ಲ, ಕಾವಿದಾರಿಗಳಲ್ಲ. ಶಿಖೆ ಬಿಟ್ಟವರಲ್ಲ, ಜಪಮಣಿ ಹಿಡಿದವರಲ್ಲ, ನಾಮಭಸ್ಮ ಲಿಂಗ ಜನಿವಾರ ಧರಿಸಿದವರಲ್ಲ. ಶುಭ್ರ ಸಾದಾ ಉಡುಪು ಧರಿಸಿದವರಾಗಿ ಸಾಮಾನ್ಯರಂತಿದ್ದಾರೆ. ಧರ್ಮಮಾರ್ಗದಲ್ಲಿ ಪರಿಣತರಿದ್ದರೂ ವಿನಯಮೂರ್ತಿಗಳಾಗಿರುತ್ತಾರೆ. ಪರಿಶುದ್ಧ ಬದುಕೇ ನಿಜವಾದ ಬದುಕೆಂಬುದನ್ನು ಮನದಟ್ಟು ಮಾಡುತ್ತಾರೆ. ದೇಹಮನಸ್ಸುಉಸಿರುಗಳಿಗಿರುವ ಅವಿನಾಭಾವ ಸಂಬಂಧಗಳನ್ನು ತಿಳಿಸುತ್ತಾ ಅತ್ಯಂತ ವೈಜ್ಞಾನಿಕವಾಗಿ ಶಾರೀರಿಕ ಸಂವೇದನೆಗಳನ್ನು ಸಮತಾಭಾವದಿಂದ ಗಮನಿಸುವ ಉಚಿತ ತರಬೇತಿ ನೀಡಿ ವಿಪಶ್ಯನ ಧ್ಯಾನವನ್ನು ಕಲಿಸಿಕೊಡುತ್ತಾರೆ. ಕೋಪ, ದ್ವೇಷ, ಅಸೂಯೆಗಳನ್ನು ತ್ಯಜಿಸಿ, ದುಶ್ಚಟಗಳಿಂದ ದೂರಾಗಿ ಎಲ್ಲಾ ಜೀವಿಗಳಲ್ಲಿಯೂ ಕರುಣೆ, ಪ್ರೀತಿ, ಕೃತಜ್ಞತಾ ಭಾವಗಳನ್ನು ಮೂಡಿಸುವಂತಹ ಸಹಜಧ್ಯಾನಮಾಡುವ ಕ್ರಮವನ್ನು ಕಲಿಸಿಕೊಡುತ್ತಾರೆ.

ಕಾಲಚಕ್ರ ತಿರುಗುತ್ತಲೇ ಇದೆ. ನಿರಂತರ ಸಾತ್ವಿಕ ಜೀವನದಿಂದ ಮತ್ತು ಮಹನೀಯರು ಕಲಿಸಿದ ವಿಪಶ್ಯನ ಧ್ಯಾನದಿಂದ ಮಾನಸಿಕ ಶಾರೀರಿಕ ಕ್ಲೇಶಗಳಿಂದ ಬಿಡುಗಡೆಯ ಭಾವ ಮೂಡುತ್ತಿದೆ. ತನ್ನಂತೆ ಪತಿತರಾದವರಿಗೆ, ಅಜ್ಞಾನದಿಂದ ಕ್ಷೋಭೆಗೊಳಗಾದವರಿಗೂ ಕೂಡಾ ಶಾಂತಿ ಸಮಾಧಾನದೊರಕುತ್ತಿದೆಯೆಂಬ ಅರಿವಾಗುತ್ತಿದೆ. ಪ್ರತಿಯೊಬ್ಬರೂ ಋಜು ಜೀವನ ನಡೆಸಿ ಮುಕ್ತರಾಗಬಹುದೆಂಬ ಪರಮಸತ್ಯವನ್ನು ಒಂದು ಕಾಲಕ್ಕೆ ವಾರಾಂಗನೆಯಾಗಿದ್ದವಳೂ ದರ್ಶನ ಮಾಡಿ ಜೀವನ್ಮುಕ್ತಳಾಗುತ್ತಾಳೆ. ■

# ಒಂದು ಗಿಳಿ ಮರಿಯ ಕಥೆ

■ ಪಿ.ಪಿ.ಉಪಾಧ್ಯ

ಚಿಕ್ಕಂದಿನಿಂದಲೂ ಒಂದು ಗಿಳಿ ಮರಿಯನ್ನು ಸಾಕಬೇಕೆಂಬುದು ಅವನ ಆಸೆಯಾಗಿತ್ತು. 'ಮನೆ ತುಂಬಿ ಹರಿಯುವಷ್ಟು ನೀವೇ ಇದ್ದೀರಿ. ಇನ್ನು ಗಿಳಿಮರಿಯೊಂದು ಕೇಡು' ಎಂದು ಅಪ್ಪ ಗದರಿದ್ದರು. 'ಅದರ ಕಕ್ಕ– ಸುಸುಗಳನ್ನು ಬಾಚಲು ನನ್ನಿಂದಾಗದು. ನಿಮ್ಮೆಲ್ಲರದ್ದು ಬಾಚಿ ಬಾಚಿಯೇ ಸಾಕಾಗಿದೆ' ಎಂದು ಹದಿನೈದನ್ನು ಹೊತ್ತು ಹನ್ನೆರಡನ್ನು ಧರೆಗಿಳಿಸಿ ಅವುಗಳಲ್ಲಿ ಹತ್ತನ್ನು ಉಳಿಸಿಕೊಂಡು ದೊಡ್ಡದು ಮಾಡಿದ ಅಮ್ಮನೂ ಅಪ್ಪನೊಂದಿಗೆ ಸೇರಿದಾಗ ಇವನ ಉತ್ಸಾಹವೆಲ್ಲ ಧರೆಗಿಳಿದಿತ್ತು.

ಆದರೆ ದಾರಿಯ ಮೇಲೆ ಮರದಲ್ಲಿ ಅಲ್ಲೊಂದು ಇಲ್ಲೊಂದು ಗಿಳಿಗಳನ್ನು ಕಂಡಾಗ, ಗಿಣಿ ಶಾಸ್ತ್ರದವರು ತಮ್ಮ ಗಿಣಿಗಳ ಬಾಯಿಯಲ್ಲಿ ಚಿತ್ರ ವಿಚಿತ್ರ ರೀತಿಯಲ್ಲಿ ಕೂಗಿಸುವಾಗ ಇವನ ಆಸೆ ಗರಿಗೆದರುತ್ತಿತ್ತು. ಗುಪ್ತವಾಗಿಯೇ ಪೋಷಿಸಿಕೊಂಡು ಬಂದ ಆ ಆಸೆಯನ್ನು ಪೂರೈಸಿಕೊಳ್ಳಲು ಸಾಧ್ಯವಾದದ್ದು ಅಷ್ಟೇ ತೀವ್ರವಾಗಿದ್ದ ಅವನ ಇನ್ನೊಂದು ಆಸೆಯಾದ ಸ್ವಂತ ಮನೆಯೊಂದನ್ನು ಮಾಡಿ ಕೊಳ್ಳಬೇಕು ಎನ್ನುವುದು ಈಡೇರಿದಾಗಲೇ. ಅವನು ದೊಡ್ಡವನಾಗಿ ಸ್ವಂತ ಕಾಲ ಮೇಲೆ ನಿಂತು ಮದುವೆ ನಂತರ ಒಂದು ಮಗು ಎಲ್ಲ ಆಗಿ ತನ್ನದೇ ಒಂದು ಗೂಡನ್ನು ಮಾಡಿ ಕೊಳ್ಳುವಾಗ ಯಾರು ಎಷ್ಟು ಕೇಳಿದರೂ ಅದೇನೆಂದು ಹೇಳದೆ ಮನೆಯ ಹಾಲಿನ ಮೂಲೆಯಲ್ಲಿ ಗಿಣಿ ಗೂಡನ್ನು ನೇತು ಹಾಕಲು ಒಂದು ಕೊಕ್ಕೆಯನ್ನು ಇಡಿಸಿದ್ದ.

ಹೊಸ ಮನೆಯ ಗೃಹಪ್ರವೇಶ ಮಾಡಿ ಎಲ್ಲರಿಗೂ ಗಡದ್ದಾಗಿ ಊಟ ಹಾಕಿಸಿ ಹೊಗಳಿಸಿ ಕೊಂಡವ ಅವರನ್ನೆಲ್ಲ ಕಳಿಸಿದ ಮೇಲೆ ಮಾಡಿದ ಮೊದಲನೇ ಕೆಲಸವೆಂದರೆ ಬಹಳ ದಿನಗಳಿಂದ ಹೊಂಚು ಹಾಕುತ್ತಿದ್ದ ಆ ಗಿಳಿಶಾಸ್ತ್ರದವನೊಡನಿದ್ದ ಎರಡು ಗಿಳಿಗಳಲ್ಲಿ ಚೆನ್ನಾಗಿ ಮಾತು ಕಲಿತು ದಷ್ಟ ಪುಷ್ಟವಾಗಿದ್ದ ಗಿಳಿಯೊಂದನ್ನು ತಂದದ್ದು. ಆ ಶಾಸ್ತ್ರದವನೋ ಭಲೇ ಘಾಟಿ. ಮೊದ ಮೊದಲು 'ಜೊತೆ ತಪ್ಪಿದರೆ ಅವು ರಾಂಗ್ ಆಗ್ತಾವೆ ಸ್ವಾಮೀ... ನೀವು ತೆಗೆದು ಕೊಳ್ಳುವುದಾದರೆ ಎರಡನ್ನೂ ತೆಗದು ಕೊಳ್ಳಬೇಕು' ಎಂದವ ಇವ ಬಡ ಪೆಟ್ಟಿಗೆ 'ಎರಡೆರಡನ್ನು ತೆಗೆದುಕೊಂಡರೆ ಅವು ತಮ್ಮ ತಮ್ಮೊಳಗೇ ವ್ಯವಹಾರ ಮಾಡಿಕೊಳ್ಳುತ್ತ ಹೊರ ಪ್ರಪಂಚವನ್ನು ಮರೆತೇ ಬಿಡುತ್ತಾವೆ' ಎಂಬ ತನ್ನದೇ ತರ್ಕವನ್ನು ಮುಂದಿಟ್ಟು ಒಪ್ಪದಿದ್ದಾಗ ಒಂದನ್ನೇ ಮಾರಲು ಸಮ್ಮತಿಸಿದ್ದ. ಗಿಳಿಯ ಬೆಲೆಯ ಬಗ್ಗೆ ಚರ್ಚೆಗೆ ಬಗ್ಗಿದವ ಗೂಡಿನ ಬೆಲೆಯನ್ನು ಇಳಿಸಲು ಒಪ್ಪಿರಲೇ ಇಲ್ಲ. ಬಹುಶಃ ಅದರಲ್ಲಾದ ನಷ್ಟವನ್ನು ಇದರಲ್ಲಿ ತುಂಬಿಕೊಳ್ಳುವ ಹುನ್ನಾರವಿರಬೇಕು. ಯದ್ವಾತದ್ವಾ ಬೆಲೆ ಹೇಳಿದ್ದ. ಗಿಳಿಯನ್ನು ಕೊಂಡ ಮೇಲೆ ಗೂಡಿಲ್ಲದೆ ಹೋಗುವುದೇ. ಹಾಗಾಗಿ ಹೇಳಿದ ಬೆಲೆ ಕೊಟ್ಟು ಕೊಂಡಿದ್ದ. ತನಗೆ ಒಂದು ಗಿಳಿ ಮತ್ತು ಆ ಗೂಡನ್ನು ಕೊಟ್ಟ ಮೇಲೆ ಉಳಿದ